ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಕೃಷ್ಣ–ತುಂಗಆವರಣ, ಮಂತ್ರಾಲಯರಸ್ತೆ, ರಾಷ್ಟ್ರೀಯ ಹೆದ್ದಾರಿ–167,
ಯರಗೇರಾ–584133, ರಾಯಚೂರು, ಕರ್ನಾಟಕ
**ಆಡಳಿತ ವಿಭಾಗ**

No. ASMVUR /ADM/ 2025-26/ 410 Date: 13.06.2025

ಇವರಿಗೆ
ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ
ಬೆಂಗಳೂರು.

ಮಾನ್ಯರೇ

ವಿಷಯ: ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರಿಷ್ಕೃತ ಲಾಂಛನ(LOGO) ವನ್ನು ಅನುಮೋದಿಸುವ ಕುರಿತು.

ಉಲ್ಲೇಖ: 1. ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರ ಸಂ: ಇಡಿ 151 ಯುಜಿವಿ 2024 ದಿನಾಂಕ: 10.02.2025
2. ದಿನಾಂಕ: 10.06.2025 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.
3. ದಿನಾಂಕ: 12.06.2025 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ರಾಯಚೂರು ವಿಶ್ವವಿದ್ಯಾಲಯವನ್ನು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವೆಂದು ಮರುನಾಮಕರಣ ಮಾಡಿದ ಹಿನ್ನೆಲೆಯಲ್ಲಿ ಈಗ ಇರುವ ವಿಶ್ವವಿದ್ಯಾನಿಲಯದ ಲಾಂಛನ ಸಂಗತಿಗಳನ್ನು ಉಳಿಸಿಕೊಂಡು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರವನ್ನು ಅಳವಡಿಸಲಾಗಿದ್ದು, ಈ ಪರಿಷ್ಕೃತ ಲಾಂಛನವನ್ನು ರೂಪಿಸಿದ್ದು ಈ ಕುರಿತು ದಿನಾಂಕ: 10.06.2025 ಮತ್ತು 12.06.2025 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಬಹುಮತದಿಂದ ಅಂಗೀಕರಿಸಲಾಗಿದೆ. ಸದರಿ ಸಭೆಯ ವಿವಿದ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕುರಿತು ದಾಖಲಿಸಿದ ನಡಾವಳಿಗಳನ್ನು ಸಹ ಈ ಪತ್ರದೊಂದಿಗೆ ಲಗತ್ತಿಸಿದೆ. ಈ ಪತ್ರದೊಂದಿಗೆ ರಾಯಚೂರು ವಿಶ್ವವಿದ್ಯಾಲಯವು ಬಳಸುತ್ತಿದ್ದ ಲಾಂಛನ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರಿಷ್ಕೃತ ಲಾಂಛನವನ್ನು ಲಗತ್ತಿಸಲಾಗಿದೆ.

ಕಾರಣ ಈ ಪರಿಷ್ಕೃತ ಲಾಂಛನವನ್ನು ನಿಯಮಾನುಸಾರ ಪರಿಶೀಲಿಸಿ ಅನುಮೋದಿಸಲು ಮಾನ್ಯರಾದ ತಮ್ಮಲ್ಲಿ ಕೋರಿದೆ.

ವಂದನೆಗಳೊಂದಿಗೆ,

13/6/25

**(ಡಾ. ಶಂಕರ ವ್ಹಿ.)**
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಅಡಕ:
1. ದಿನಾಂಕ: 10.06.2025 ಮತ್ತು 12.06.2025 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.
2. ರಾಯಚೂರು ವಿಶ್ವವಿದ್ಯಾಲಯವು ಬಳಸುತ್ತಿದ್ದ ಲಾಂಛನ.
3. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರಿಷ್ಕೃತ ಲಾಂಛನ.

ಪ್ರತಿ:
1. ಕುಲಸಚಿವರು (ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
2. ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು**

ದಿನಾಂಕ 12.06.2025 ರಂದು ಗುರುವಾರ ಸಾಯಂಕಾಲ 6 ಗಂಟೆಗೆ ವಿಶ್ವವಿದ್ಯಾನಿಲಯದಲ್ಲಿ ಆನ್‌ಲೈನ್ ಮೋಡ್‌ನಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು. [ವಿಶೇಷ]

**ಸಭೆಯಲ್ಲಿ ಹಾಜರಿದ್ದ ಸದಸ್ಯರು (ಆನ್‌ಲೈನ್)**

| | | | |
|---|---|---|---|
| 1. | ಡಾ. ಸುಯಮೀಂದ್ರ ಕುಲಕರ್ಣಿ, ಕುಲಪತಿಗಳು (ಹಂಗಾಮಿ) | : | ಅಧ್ಯಕ್ಷರು |
| 2. | ಡಾ. ಕೆ. ವೆಂಕಟೇಶ್, ಡೀನರು, ಸಮಾಜ ವಿಜ್ಞಾನ ನಿಕಾಯ | : | ಸದಸ್ಯರು |
| 3. | ಶ್ರೀ ಡಿ.ಆರ್. ಚಿನ್ನ | : | ಸದಸ್ಯರು |
| 4. | ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ | : | ಸದಸ್ಯರು |
| 5. | ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ | : | ಸದಸ್ಯರು |
| 6. | ಶ್ರೀ ಚನ್ನಬಸವ ತಂದೆ ಬಸವರಾಜಪ್ಪ | : | ಸದಸ್ಯರು |
| 7. | ಡಾ. ಪದ್ಮಾಕರ್ ಅಶೋಕ ಕುಮಾರ | : | ಸದಸ್ಯರು |
| 8. | ಶ್ರೀ ಪಾಂಡು | : | ಸದಸ್ಯರು |
| 9. | ಪ್ರೊ ಪಾರ್ವತಿ ಸಿ.ಎಸ್., ಡೀನರು, ಶಿಕ್ಷಣ ನಿಕಾಯ (ಪ್ರಭಾರ) | : | ಸದಸ್ಯರು |
| 10. | ಡಾ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | : | ಸದಸ್ಯರು |
| 11. | ಡಾ. ಶಂಕರ್ ವಿ., ಕೆ.ಎ.ಎಸ್. (ಆಯ್ಕೆ ಶ್ರೇಣಿ), ಕುಲಸಚಿವರು (ಆಡಳಿತ) | : | ಸದಸ್ಯ ಕಾರ್ಯದರ್ಶಿಗಳು |

ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭೆಯನ್ನು ಪ್ರಾರಂಭಿಸಿದರು.

**ಚರ್ಚೆಯ ವಿಷಯ**

ರಾಯಚೂರು ವಿಶ್ವವಿದ್ಯಾಲಯ‌ವನ್ನು ಕರ್ನಾಟಕ ಘನ ಸರ್ಕಾರವು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಎಂದು ಮರುನಾಮಕರಣಗೊಳಿಸಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಇರುವ ಲಾಂಛನ (ಲೊಗೊ)ದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಯವರ ಫೋಟೋ (ಭಾವಚಿತ್ರ) ಸೇರ್ಪಡೆ ಮಾಡುವ ಕುರಿತು ಚರ್ಚೆ.

**ಚರ್ಚೆ**

- ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ ಇವರು ಮಾತನಾಡುತ್ತ ಲಾಂಛನದಲ್ಲಿ ಇರುವ ವಿವರಗಳನ್ನು ಒಪ್ಪುತ್ತಾ ಲಾಂಛನದ ಕೆಳಗಡೆ ಇರುವ ವಿದ್ಯೆಯಿಂದ ಅಮರತ್ವವು ಎನ್ನುವ ವಾಕ್ಯದ ಕೊನೆಯ ಅಕ್ಷರವಾದ "ವು" ತೆಗೆಯಲು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ಇದಕ್ಕೆ ಅನೇಕ ಸದಸ್ಯರು ಸಹಮತಿಸಿದರು. ಮುಂದುವರೆದು, ಕೂಡಲೇ ಸರ್ಕಾರದ ಅನುಮೋದನೆಗಾಗಿ ಕಳುಹಿಸುವಂತೆ ಸೂಚಿಸಿದರು.
- ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರು ಸಭೆಯಲ್ಲಿ ಭಾಗವಹಿಸಿ ಕಳೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ಮಲಯಾಬಾದ್ ಆನೆಗಳ ಚಿತ್ರಗಳನ್ನು ಬಳಸುವುದು. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಕೆಳಗಡೆ ಒಂದೇ ವಾಲ್ಮೀಕಿ ಕೋಕಿಲಂ ಘೋಷ ವಾಕ್ಯ ಸೇರಿಸುವುದರ ಕುರಿತಂತೆ ಸಿಂಡಿಕೇಟ್ ಸಭೆಯ ಹೊರಗಡೆ ಚರ್ಚಿಸುವುದು, ಈ ಬಗ್ಗೆ ಒತ್ತಡ ಹಾಕುವುದು ಸಿಂಡಿಕೇಟ್ ಸಭೆಯ ಘನತೆಗೆ ಸೂಕ್ತವಲ್ಲ ಎಂದರಲ್ಲದೇ ಈ ವಂದೇ ವಾಲ್ಮೀಕಿ ಕೋಕಿಲಂ ಘೋಷ ವಾಕ್ಯದ ಬಗ್ಗೆ ತಮ್ಮ ತಕರಾರು ಏನೂ ಇಲ್ಲ ಆದರೆ ಚರ್ಚೆ ಸಿಂಡಿಕೇಟ್ ಸಭೆಯಲ್ಲಿ ಆದರೆ ಸೂಕ್ತ ಎಂದರು ಮುಂದುವರೆದು ವಾಲ್ಮೀಕಿ ದಲಿತ ಪ್ರತಿಭೆಯ ಬಗ್ಗೆ ನಮ್ಮಗೆಲ್ಲರಿಗೂ ಗೌರವ ಎಂದರಲ್ಲದೇ ಲಾಂಛನಕ್ಕೆ ಒಪ್ಪಿಗೆಯನ್ನು ಸೂಚಿಸಿದರು.
- ಶ್ರೀ ಚನ್ನಬಸವ ಇವರು ಲಾಂಛನದ ಕುರಿತಂತೆ ಸಂಪೂರ್ಣ ಸಮ್ಮತಿಯನ್ನು ಸೂಚಿಸಿ ಯಾವುದೇ ರೀತಿಯ ತಕರಾರು ಇಲ್ಲ ಎಂದರು

- ಪ್ರೊ. ಪಾರ್ವತಿ ಸಿ.ಎಸ್., ಇವರು ವಿಶ್ವವಿದ್ಯಾಲಯದ ಲಾಂಛನದಲ್ಲಿ ಬರುವ ಬಣ್ಣಗಳು ಗಾಢವಾಗಿರುವುದು ಸೂಕ್ತ ಎಂದರಲ್ಲದೇ ವಂದೇ ವಾಲ್ಮೀಕಿ ಕೋಕಿಲಂ ವಾಕ್ಯವು ಈ ಹಿಂದೆ ಇದ್ದ ವಿದ್ಯೆಯಿಂದ ಅಮರತ್ವವು ಇವರು ಸ್ಥಳದಲ್ಲಿ ಬಂದರೆ ಸೂಕ್ತ ಎಂದರು ಇದಕ್ಕೆ ಕುಲಪತಿಗಳು ನೀಡಿದ ಸಮಜಾಯಿಷಿಗೆ ಒಪ್ಪಿ ಲಾಂಛನಕ್ಕೆ ಒಪ್ಪಿಗೆ ಸೂಚಿಸಿದರು
- ಡಾ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ), ಇವರು ಲಾಂಛನಕ್ಕೆ ಒಪ್ಪಿಗೆ ಸೂಚಿಸಿದರು
- ಡಾ. ಪದ್ಮಾಕರ್ ಅಶೋಕ ಕುಮಾರ ಇವರು ಲಾಂಛನಕ್ಕೆ ಒಪ್ಪಿಗೆ ಸೂಚಿಸಿದರು
- ಶ್ರೀ ಪಾಂಡು ಇವರು ಆನಲೈನ್ ಸಭೆಯಲ್ಲಿ ಪಾಲ್ಗೊಂಡಿದ್ದು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.
- ಶ್ರೀ ಡಿ.ಆರ್. ಚಿನ್ನ ಇವರು ಚರ್ಚೆಯಲ್ಲಿ ಭಾಗವಹಿಸಿ ಇನ್ನೋರ್ವ ಸದಸ್ಯರಾದ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರ ಅಭಿಪ್ರಾಯಕ್ಕೆ ತಮ್ಮ ಸಹಮತ ವ್ಯಕ್ತಪಡಿಸಿ ಲಾಂಛನಕ್ಕೆ ಒಪ್ಪಿಗೆ ಸೂಚಿಸಿದರು.
- ಕುಲಸಚಿವರು, ಈ ಹಿಂದೆ ದಿನಾಂಕ 10.06.2025 ರಂದು ನಡೆದ ಸಭೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಬದ್ಧನಾಗಿರುತ್ತೇನೆಂದು ತಿಳಿಸಿದರು ಆ ಅಭಿಪ್ರಾಯವು ಈ ರೀತಿ ಇರುತ್ತದೆ: ಪ್ರಸ್ತುತ ವಿಶ್ವವಿದ್ಯಾಲಯದ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರವನ್ನು ಸೇರಿಸುವುದನ್ನು ಸ್ವಾಗತಿಸುತ್ತ ಹಿಂದೆ ಕುಲಪತಿಗಳು ವಿಶ್ವವಿದ್ಯಾಲಯದ ಲಾಂಛನವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಯಾವ ರೀತಿ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಜನಪ್ರತಿನಿಧಿಗಳ, ವಿವಿಧ ಕನ್ನಡಪರ ಸಂಘ ಸಂಸ್ಥೆಗಳ, ಗಣ್ಯರ, ಸಮಾಜದ ಪ್ರಮುಖರ, ಸಾಹಿತಿಗಳ, ಕವಿಗಳ, ಶಿಕ್ಷಣ ತಜ್ಞರ, ಚಿಂತಕರ, ಪತ್ರಕರ್ತರ, ವ್ಯಾಪಾರಿ/ಉದ್ಯಮಿಗಳ ಸಭೆಯನ್ನು ಕರೆಯುವ ಮುಖಾಂತರ ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿ ವಿನ್ಯಾಸಗೊಳಿಸಿದ ಅಂತಿಮ ಲಾಂಛನವನ್ನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನ ಪಡೆದು ನಂತರ ಮಾನ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಅದರಂತೆ ಈಗೂ ಸಹ ಸದರಿ ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ಅಗತ್ಯ ಮಾರ್ಪಾಡುಗಳೊಂದಿಗೆ ಅಂತಿಮವಾಗಿ ವಿನ್ಯಾಸಗೊಳಿಸಿದ ಲಾಂಛನವನ್ನು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಒಪ್ಪಿಗೆ ಪಡೆದು ಮಾನ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸುವುದು ಸೂಕ್ತವಾಗಿರುತ್ತದೆ

**ನಿರ್ಣಯ**

ಆನ್‌ಲೈನ್ ಸಭೆಯಲ್ಲಿ ಭಾಗವಹಿಸಿದ್ದ ಮಾನ್ಯ ಸಿಂಡಿಕೇಟ್ ಸದಸ್ಯರು ಈ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿ ಸಭೆಯಲ್ಲಿ ಮಂಡಿಸಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ನೂತನ ಲಾಂಛನವನ್ನು ಬಹುಮತದಿಂದ ಅನುಮೋದಿಸಿ ಸರ್ಕಾರದ ಅನುಮೋದನೆ ಪಡೆಯಲು ಸೂಚಿಸಿದರು.

ಸಭೆಯಲ್ಲಿ ಭಾಗವಹಿಸಿದ ಮಾನ್ಯ ಸಿಂಡಿಕೇಟ್ ಸದಸ್ಯರಿಗೆ ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

13/6/25

ಡಾ. ಶಂಕರ ವಿ.
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ಆ.ಶ್ರೀ.ಮ.ವಾ.ವಿಶ್ವವಿದ್ಯಾಲಯ,
ರಾಯಚೂರು

ಡಾ. ಸುಯಮೀಂದ್ರ ಕುಲಕರ್ಣಿ
ಕುಲಪತಿಗಳು (ಹಂಗಾಮಿ) ಹಾಗೂ ಅಧ್ಯಕ್ಷರು
ಆ.ಶ್ರೀ.ಮ.ವಾ.ವಿಶ್ವವಿದ್ಯಾಲಯ,
ರಾಯಚೂರು

## ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ದಿನಾಂಕ: **10.06.2025** ರಂದು ಮಂಗಳವಾರ ಮಧ್ಯಾಹ್ನ **12.00** ಗಂಟೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಹೈಬ್ರಿಡ್ (ಆನ್‌ಲೈನ್/ಆಫ್‌ಲೈನ್) ಮೋಡ್‌ನಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :**

1) ಡಾ. ಸುಯಮೀಂದ್ರ ಕುಲಕರ್ಣಿ, ಕುಲಪತಿಗಳು (ಪ್ರಭಾರ) – ಅಧ್ಯಕ್ಷರು (ಆಫ್‌ಲೈನ್)
2) ಡಾ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು (ಆಫ್‌ಲೈನ್)
3) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ, (ಪ್ರಭಾರ) – ಸದಸ್ಯರು (ಆಫ್‌ಲೈನ್)
4) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು (ಆನ್‌ಲೈನ್)
5) ಶ್ರೀ ಶ್ರೇಯಂಕ ಎಚ್. ವಿ. – ಸದಸ್ಯರು (ಆನ್‌ಲೈನ್)
6) ಶ್ರೀ ಡಿ.ಆರ್. ಚಿನ್ನ – ಸದಸ್ಯರು (ಆನ್‌ಲೈನ್)
7) ಶ್ರೀ ಜೀಶಾನ್ ಆಖಿಲ್ ಸಿದ್ದಿಖಿ – ಸದಸ್ಯರು (ಆನ್‌ಲೈನ್)
8) ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ – ಸದಸ್ಯರು (ಆಫ್‌ಲೈನ್)
9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ – ಸದಸ್ಯರು (ಆಫ್‌ಲೈನ್)
10) ಡಾ. ಪದ್ಮಾಕರ್ ಅಶೋಕ ಕುಮಾರ – ಸದಸ್ಯರು (ಆನ್‌ಲೈನ್)
11) ಡಾ. ಇಕ್ಬಾಲ್ ಶೇಖ್ – ಸದಸ್ಯರು (ಆನ್‌ಲೈನ್)
12) ಡಾ. ಶಂಕರ್ ವಿ., ಕೆ.ಎ.ಎಸ್. (ಆಯ್ಕೆ ಶ್ರೇಣಿ), ಕುಲಸಚಿವರು (ಆಡಳಿತ) – ಸದಸ್ಯ ಕಾರ್ಯದರ್ಶಿಗಳು (ಆನ್ ಲೈನ್)

ಮಾನ್ಯ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭೆಯನ್ನು ಪ್ರಾರಂಭಿಸಿದರು.

**ಚರ್ಚೆಯ ವಿಷಯ:**

'ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವನ್ನು ಘನ ಸರ್ಕಾರವು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಎಂದು ಮರುನಾಮಕರಣಗೊಳಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಇರುವ ಲಾಂಛನ (ಲೊಗೊ)ದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಯವರ ಫೋಟೋ (ಭಾವಚಿತ್ರ) ಸೇರ್ಪಡೆ ಮಾಡುವ ಕುರಿತು ಚರ್ಚೆ.'

ಮಾನ್ಯ ಕುಲಪತಿಗಳು ಪ್ರಸ್ತಾವಿಕವಾಗಿ ಮಾತನಾಡುತ್ತ ಪ್ರಸ್ತುತ ಇರುವ ವಿಶ್ವವಿದ್ಯಾಲಯದ ಲಾಂಛನದ ವಿನ್ಯಾಸ ಮತ್ತು ಘೋಷವಾಕ್ಯದ ಕುರಿತು ಸ್ಪಷ್ಟವಾದ ವಿವರಣೆ ನೀಡಿದರು. ಲಾಂಛನದ ಶಿಖರದಲ್ಲಿರುವ ಕಮಾನುಗಳು ರಾಯಚೂರು ಹಾಗೂ ಯಾದಗಿರಿಯ ಕೋಟೆಗಳ ಪ್ರತೀಕವಾಗಿರುತ್ತದೆ. ಲಾಂಛನದಲ್ಲಿಯ ಆನೆಯು ರಾಯಚೂರು ನಗರದ ಹಾಗೂ ಸ್ಥಳೀಯ ಮಲಿಯಾಬಾದ್ ಕೋಟೆಯಲ್ಲಿರುವ ಕಲ್ಲಾನೆಯನ್ನು ಬಿಂಬಿಸುತ್ತದೆ. ನೀಲಿ ಬಣ್ಣವು ವಿಶ್ವವಿದ್ಯಾಲಯದ ವ್ಯಾಪ್ತಿಯ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹರಿಯುವ ಕೃಷ್ಣಾ, ತುಂಗಭದ್ರಾ ಮತ್ತು

ಪು.ತಿ.ನೋ.

ಭೀಮಾ ನದಿಗಳನ್ನು ಬಿಂಬಿಸುತ್ತದೆ. ಹಸಿರು ಬಣ್ಣವು ಉಭಯ ಜಿಲ್ಲೆಗಳ ಪ್ರಮುಖ ಬೆಳೆಗಳಾದ ಭತ್ತ, ಹತ್ತಿ ಹಾಗೂ ತೊಗರಿ ಬೆಳೆಗಳ ಫಲವತ್ತತೆ ಬಿಂಬಿಸುತ್ತವೆ. ಕೊನೆಯದಾಗಿ ಲಾಂಛನದ ಹಳದಿ ಅಥವಾ ಸ್ವರ್ಣ ಬಣ್ಣವು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯನ್ನು ಪ್ರತಿನಿಧಿಸುತ್ತದೆ ಎಂದು ತಿಳಿಸಿದರು ಮತ್ತು ಘೋಷವಾಕ್ಯವಾದ ವಿದ್ಯೆಯಿಂದ ಅಮರತ್ವವು ಕುರಿತು ಚರ್ಚಿಸಿದರು.

ಮಾನ್ಯ ಕುಲಪತಿಗಳು ಸದರಿ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯ ಕುರಿತು ಪ್ರಸ್ತಾಪಿಸುತ್ತ ಈಗಾಗಲೇ ಇರುವ ವಿಶ್ವವಿದ್ಯಾಲಯದ ಲಾಂಛನಕ್ಕೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ಕೆಲವೊಂದು ಸಣ್ಣ ಪುಟ್ಟ ಮಾರ್ಪಾಡುಗಳನ್ನು ಮಾಡಿದ ಕರಡು ಲಾಂಛನದ ಚಿತ್ರವನ್ನು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರಿಗೆ ಪರದೆಯ ಮೇಲೆ ಪ್ರದರ್ಶಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ಕೋರಿದರು.

ಸಭೆಯಲ್ಲಿ ಹಾಜರಿದ್ದ ಸದಸ್ಯರು ಈ ಕೆಳಗಿನಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು

- ಶ್ರೀ ಚನ್ನಬಸವ ಇವರು ಶ್ರೀ ಮಹರ್ಷಿ ವಾಲ್ಮೀಕಿ ಇವರ ಭಾವಚಿತ್ರದ ಜೊತೆಗೆ ವಿಶ್ವವಿದ್ಯಾಲಯದ ಈಗಿರುವ ಘೊಷವಾಕ್ಯವಾದ ವಿದ್ಯೆಯಿಂದ ಅಮರತ್ವವು ಬದಲಾಗಿ ಒಂದೇ ವಾಲ್ಮೀಕಿ ಕೋಕಿಲಂ ಎಂಬ ಘೋಷ ವಾಕ್ಯ ಬದಲಾಯಿಸುವಂತೆ ಕೋರಿದರು.

- ಶ್ರೀ ಡಿ.ಆರ್. ಚಿನ್ನ ಇವರು ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಸೇರ್ಪಡೆಯನ್ನು ಸ್ವಾಗತಿಸುತ್ತ ಒಂದೇ ವಾಲ್ಮೀಕಿ ಕೋಕಿಲಂ ಈ ಘೋಷವಾಕ್ಯದ ಅರ್ಥ ಉನ್ನತ ಶಿಕ್ಷಣಕ್ಕಾಗಲೀ ಅಥವಾ ವಿಶ್ವವಿದ್ಯಾಲಯಕ್ಕಾಗಲೀ ಪ್ರಸ್ತುತವಾಗಿದೆಯೇ ಎಂಬುದನ್ನು ಪ್ರಶ್ನಿಸಿದರು.

- ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರು ಸಭೆಯಲ್ಲಿ ಪ್ರದರ್ಶನಗೊಳಿಸಿದ ಕರಡು ಲಾಂಛನದ ಕುರಿತು ಮಾತನಾಡುತ್ತ ಕೆಲವೊಂದು ಸಣ್ಣಪುಟ್ಟ ಅಕ್ಷರ ಜೋಡಣೆ/ವಿನ್ಯಾಸ ಮಾಡುವಂತೆ ಮತ್ತು ಲಾಂಛನದಲ್ಲಿರುವ ಆನೆಯನ್ನು ರಾಯಚೂರು ಮತ್ತು ಮಲಿಯಾಬಾದ್‌ದಲ್ಲಿರುವ ಕಲ್ಲಾನೆಯಂತೆ ಯಥಾ ರೀತಿ ಚಿತ್ರಿಸುವಂತೆ ಅಭಿಪ್ರಾಯಪಟ್ಟರು ಮತ್ತು ಶ್ರೀ ಚನ್ನಬಸವ ಅವರು ಸೂಚಿಸಿದ ಒಂದೇ ವಾಲ್ಮೀಕಿ ಕೋಕಿಲಂ ಘೋಷ ವಾಕ್ಯದ ಬದಲಾಗಿ ಮಾನವ ಜನ್ಮಕ್ಕೆ ಜಯವಾಗಲಿ, ಮನುಜಮತ ವಿಶ್ವಪಥ ಅಂತಹ Inclusive ಘೋಷವಾಕ್ಯವನ್ನಾಗಲೀ ಅಥವಾ ಈಗಿರುವ ವಿದ್ಯೆಯಿಂದ ಅಮರತ್ವವು ಘೋಷವಾಕ್ಯವನ್ನೆ ಮುಂದುವರೆಸುವಂತೆ ಅಭಿಪ್ರಾಯಪಟ್ಟರು.

- ಡಾ. ನಾಗರತ್ನ ಎಂ. ನಾಯ್ಕ್ ಇವರು ಮಾತನಾಡುತ್ತ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ಇವರ ಭಾವಚಿತ್ರ ಸೇರ್ಪಡೆಯನ್ನು ಸ್ವಾಗತಿಸುತ್ತ ಮಹರ್ಷಿ ವಾಲ್ಮೀಕಿ ಅವರ ನೇರ ಮುಖ

ಮು.ತಿ.ನೋ.

ಮಾಡಿದ ಭಾವಚಿತ್ರ ಸಮಂಜಸವೆಂದು ತಿಳಿಸುತ್ತ ಲಾಂಛನದ ಹಕ್ಕುಸ್ವಾಮ್ಯವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು ಮತ್ತು ಸಿಂಡಿಕೇಟ್ ಸಭೆಯ ಜೊತೆ ಜೊತೆಗೆ ವಿಶ್ವವಿದ್ಯಾಲಯದ ಪಾಲುದಾರರ ಮತ್ತು ಜನಸಾಮಾನ್ಯರ ಅಭಿಪ್ರಾಯವನ್ನು ಪಡೆಯುವುದು ಇನ್ನು ಸಮಂಜಸವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

- ಶ್ರೀ ಶ್ರೇಯಂಕ ಎಚ್. ವಿ. ಇವರು ಸಭೆಗೆ ಆನ್‌ಲೈನ್ ಮುಖಾಂತರ ಹಾಜರಾಗಿ ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೇ ಕೆಲವು ನಿಮಿಷಗಳ ನಂತರ ತುರ್ತುಕಾರ್ಯ ನಿಮಿತ್ಯ ನಿರ್ಗಮಿಸಿದರು.

- ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ ಇವರು ಮಾತನಾಡುತ್ತ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ಇವರ ಭಾವಚಿತ್ರವನ್ನು ಸೇರಿಸುವುದನ್ನು ಸ್ವಾಗತಿಸುತ್ತ ಶ್ರೀ ಜಿಶಾನ್ ಅವರ ಅಭಿಪ್ರಾಯವನ್ನು ಸಹಮತಿಸಿದರು.

- ಡಾ. ಪದ್ಮಾಕರ್ ಅಶೋಕ ಕುಮಾರ ಇವರು ಕೇವಲ ಸಭೆಗೆ ಆನ್‌ಲೈನ್‌ದಲ್ಲಿ ಹಾಜರಾತಿಯನ್ನು ಮಾತ್ರ ದಾಖಲಿಸಿದರು, ಆದರೆ ಯಾವುದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

- ಡಾ. ಇಕ್ಬಾಲ್ ಶೇಖ್ ಇವರು ಮಾತನಾಡುತ್ತ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ಇವರ ಭಾವಚಿತ್ರವನ್ನು ಸೇರಿಸುವುದನ್ನು ಸ್ವಾಗತಿಸುತ್ತ ಶ್ರೀ ಜಿಶಾನ್ ಅವರ ಅಭಿಪ್ರಾಯವನ್ನು ಸಹಮತಿಸಿದರು.

- ಪ್ರೊ. ಪಾರ್ವತಿ ಸಿ.ಎಸ್., ಇವರು ವಿಶ್ವವಿದ್ಯಾಲಯದ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ಇವರ ಭಾವಚಿತ್ರ ಸೇರ್ಪಡೆಯನ್ನು ಸ್ವಾಗತಿಸುತ್ತ ಕರಡು ಲಾಂಛನದ ವಿನ್ಯಾಸವನ್ನು ಒಪ್ಪಿದರು.

- ಡಾ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ), ಇವರು ಮಾತನಾಡುತ್ತ ಕರಡು ಲಾಂಛನದಲ್ಲಿ ತಿಳಿ ಬಣ್ಣಗಳ ಬದಲಾಗಿ ಗಾಢ ಬಣ್ಣಗಳನ್ನು ಬಳಸುವುದು ತಾಂತ್ರಿಕವಾಗಿ ಮುದ್ರಣ ಹಾಗೂ ಪ್ರದರ್ಶನ ಮಾಡಲು ಅನುಕೂಲವಾಗಿರುತ್ತದೆಂದು ಅಭಿಪ್ರಾಯ ಪಟ್ಟರು ಮತ್ತು ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನು ಲಾಂಛನದಲ್ಲಿ ಸೇರ್ಪಡೆಗೊಳಿಸುವುದನ್ನು ಸ್ವಾಗತಿಸಿದರು.

- ಕೊನೆಯದಾಗಿ ಕುಲಸಚಿವರು, ಪ್ರಸ್ತುತ ವಿಶ್ವವಿದ್ಯಾಲಯದ ಲಾಂಛನದಲ್ಲಿ ಮಹರ್ಷಿ ವಾಲ್ಮೀಕಿ ರವರ ಭಾವಚಿತ್ರವನ್ನು ಸೇರಿಸುವುದನ್ನು ಸ್ವಾಗತಿಸುತ್ತ ಹಿಂದೆ ಕುಲಪತಿಗಳು ವಿಶ್ವವಿದ್ಯಾಲಯದ

ಮು.ತಿ.ನೋ.

ಲಾಂಛನವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಯಾವ ರೀತಿ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಜನಪ್ರತಿನಿಧಿಗಳ, ವಿವಿಧ ಕನ್ನಡಪರ ಸಂಘ ಸಂಸ್ಥೆಗಳ, ಗಣ್ಯರ, ಸಮಾಜದ ಪ್ರಮುಖರ, ಸಾಹಿತಿಗಳ, ಕವಿಗಳ, ಶಿಕ್ಷಣ ತಜ್ಞರ, ಚಿಂತಕರ, ಪತ್ರಕರ್ತರ, ವ್ಯಾಪಾರಿ/ಉದ್ಯಮಿಗಳ ಸಭೆಯನ್ನು ಕರೆಯುವ ಮುಖಾಂತರ ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿ ವಿನ್ಯಾಸಗೊಳಿಸಿದ ಅಂತಿಮ ಲಾಂಛನವನ್ನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಮಾನ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಅದರಂತೆ ಈಗೂ ಸಹ ಸದರಿ ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ಅಗತ್ಯ ಮಾರ್ಪಾಡುಗಳೊಂದಿಗೆ ಅಂತಿಮವಾಗಿ ವಿನ್ಯಾಸಗೊಳಿಸಿದ ಲಾಂಛನವನ್ನು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಒಪ್ಪಿಗೆ ಪಡೆದು ಮಾನ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸುವುದು ಸೂಕ್ತವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಮಾನ್ಯ ಮುಖ್ಯಮಂತ್ರಿಗಳ ಆಗಮನದ ಪೂರ್ವಭಾವಿ ತಯಾರಿಯ ಕುರಿತು ಕರೆಯಲಾದ ತುರ್ತು ಸಭೆಗೆ ಹಾಜರಾಗಲು ರಾಯಚೂರಿನ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತ ಸಭೆಯಲ್ಲಿ ಸ್ವೀಕೃತವಾದ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ಪರಿಗಣಿಸಿ ಅಗತ್ಯ ಮಾರ್ಪಾಡುಗಳೊಂದಿಗೆ ಅಂತಿಮವಾಗಿ ಸಿದ್ಧಪಡಿಸಿದ ವಿಶ್ವವಿದ್ಯಾಲಯದ ಲಾಂಛನವನ್ನು ಮಾನ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸಿ ಕೊಡಲಾಗುವುದು ಎಂದು ಅಶ್ವಾಸನೆ ನೀಡಿದರು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸುತ್ತ ಸಭೆಯನ್ನು ಮುಕ್ತಾಯಗೊಳಿಸಿದರು.

**ಡಾ. ಶಂಕರ ವಿ.**
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಕುಲಸಚಿವರು
ಆ.ಶ್ರೀ.ಮ.ವಾ.ವಿಶ್ವವಿದ್ಯಾಲಯ,
ರಾಯಚೂರು

**ಡಾ. ಸುಯಮೀಂದ್ರ ಕುಲಕರ್ಣಿ**
ಕುಲಪತಿಗಳು
ಆ.ಶ್ರೀ.ಮ.ವಾ.ವಿಶ್ವವಿದ್ಯಾಲಯ,
ರಾಯಚೂರು

# ಪ್ರಸ್ತುತ ಇರುವ ಲಾಂಛನ

## ಲಾಂಛನ ಶಿಖರ ಮತ್ತು ಧ್ಯೇಯವಾಕ್ಯ

### ರಚನೆ

ಲಾಂಛನ ಶಿಖರದ ಆಕಾರವು ರಾಯಚೂರು ಮತ್ತು ಯಾದಗಿರಿಯ ಕೋಟೆಗಳ ಮೇಲಿರುವ ಕಮಾನುಗಳಿಂದ ಸ್ಫೂರ್ತಿ ಪಡೆದಿರುವುದರ ಜೊತೆಗೆ ಇತಿಹಾಸದ ಸವಿಯನ್ನು ನೀಡುವುದರೊಂದಿಗೆ ಲಾಂಛನಕ್ಕೆ ಸೊಬಗು ನೀಡುತ್ತದೆ.

ಲಾಂಛನದ ನೀಲಿ ಭಾಗವು ರಾಯಚೂರು ಹಾಗೂ ಯಾದಗಿರಿಯಲ್ಲಿ ಹರಿಯುವ ಕೃಷ್ಣ, ತುಂಗಭದ್ರಾ ಹಾಗೂ ಭೀಮಾ ನದಿಗಳನ್ನು ಪ್ರತಿನಿಧಿಸುವುದರ ಜೊತೆಗೆ ಈ ಜಿಲ್ಲೆಗಳ ಆರ್ಥಿಕತೆಯನ್ನು ಬೆಂಬಲಿಸುವ ಬೆನ್ನೆಲುಬಾಗಿವೆ.



ಯಾದಗಿರಿ ಕೋಟೆಯ ದ್ವಾರಬಾಗಿಲುಗಳು ಲಾಂಛನದ ಕಳಶಪ್ರಾಯದಂತಿರುವ ಕಿರೀಟಕ್ಕೆ ಸ್ಫೂರ್ತಿಯಾಗಿವೆ

ಲಾಂಛನದ ಪ್ರಮುಖ ಭಾಗವಾಗಿರುವ ಆನೆಯು ರಾಯಚೂರಿನ ಸುಪ್ರಸಿದ್ಧ ಮಲಿಯಾಬಾದ್ ಕೋಟೆಯಲ್ಲಿ ನೆಲೆನಿಂತಿರುವ 16ನೇ ಶತಮಾನದಲ್ಲಿ ಬಿಳಿ ಗ್ರಾನೈಟ್‌ನಲ್ಲಿ ಕೆತ್ತಲಾದ ನಿಜಗಾತ್ರದ ಕಲ್ಲಾನೆಯನ್ನು ಪ್ರತಿನಿಧಿಸಿರುತ್ತದೆ.

ಲಾಂಛನದ ಹಸಿರು ಭಾಗವು ಕರ್ನಾಟಕದ 'ದಾಲ್ ಬೌಲ್' ಎಂದೇ ಕರೆಯಲ್ಪಡುವ ಈ ಪ್ರದೇಶದ ಕೃಷಿ ಪರಂಪರೆಯನ್ನು ಪ್ರತಿನಿಧಿಸುತ್ತದೆ

# ಪರಿಷ್ಕೃತ ಲಾಂಛನ

## ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಲಾಂಛನ ಮತ್ತು ಧ್ಯೇಯವಾಕ್ಯ




1. ಲಾಂಛನದ ಶಿಖರವು ರಾಯಚೂರು ಮತ್ತು ಯಾದಗಿರಿ ಕೋಟೆಗಳ ಕಮಾನುಗಳನ್ನು ಹೊಂದಿದ್ದು, ಈ ಎರಡು ಜಿಲ್ಲೆಗಳ ಚರಿತ್ರೆಯ ಘನತೆ ಮತ್ತು ಪರಂಪರೆಯನ್ನು ಪ್ರತಿನಿಧಿಸುತ್ತವೆ

2. ಲಾಂಛನದ ಮೇಲ್ಭಾಗದ ಎರಡು ಬದಿಗಳು ಪರಸ್ಪರ ಮುಖಮಾಡಿರುವ ರಾಯಚೂರಿನ ಮಲಿಯಾಬಾದ ಪರಿಸರದಲ್ಲಿರುವ 16ನೇ ಶತಮಾನದಲ್ಲಿ ನಿಜಗಾತ್ರದಲ್ಲಿ ಕೆತ್ತಲಾದ ಕಲ್ಲಾನೆಗಳನ್ನು ಹೊಂದಿವೆ. ಈ ಆನೆಗಳು ಈ ಪ್ರದೇಶದ ಜನವರ್ಗದ ಸಾಮರ್ಥ್ಯ, ಪರಿಶ್ರಮ ಮತ್ತು ಅಂತಃಸತ್ವದ ಮನೋಧರ್ಮವನ್ನು ಸೂಚಿಸುತ್ತವೆ.

3. ಲಾಂಛನದ ಪ್ರಧಾನ ಭಾಗವು ಭಾರತಕ್ಕೆ ರಾಮಾಯಣ ಮಹಾಕಾವ್ಯವನ್ನು ನೀಡಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯ ಭಾವಚಿತ್ರವನ್ನು ಹೊಂದಿದೆ. ವಾಲ್ಮೀಕಿ ಪರಂಪರೆ ಈ ನಾಡಿನ ಬಹುತ್ವ, ಜಾತ್ಯತೀತ ಗುಣ ಮತ್ತು ಸರ್ವಶ್ರೇಷ್ಠ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಮಹರ್ಷಿ ವಾಲ್ಮೀಕಿಯವರ ಅಧ್ಯಯನ ಮತ್ತು ಆಲೋಚನೆಯ ಧ್ಯಾನಸ್ಥ ಭಂಗಿ ಈ ನಾಡಿನ ಎಲ್ಲ ಜನವರ್ಗಗಳಿಗೆ ದೊರಕಬೇಕಾದ ವಿದ್ಯೆ ಮತ್ತು ವಿವೇಕದ ರೂಪಕವಾಗಿದೆ.

4. ಲಾಂಛನದಲ್ಲಿರುವ ಹಣತೆಯು ಅನಕ್ಷರತೆ ಹಾಗೂ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಶಿಕ್ಷಣವೆಂಬ ಬೆಳಕು ಸಮಸ್ತ ಸಮುದಾಯಗಳಿಗೆ ಪಸರಿಸುವ ಪ್ರತಿಮೆಯಾಗಿದೆ.

5. ಲಾಂಛನದ ನೀಲಿ ಬಣ್ಣವು ಈ ಪರಿಸರದಲ್ಲಿ ಹರಿಯುವ ಕೃಷ್ಣಾ, ತುಂಗಭದ್ರ ಮತ್ತು ಭೀಮಾ ಈ ಮೂರು ಜೀವನದಿಗಳ ಜಲತತ್ವ, ಅನಿಕೇತನಭಾವ ಹಾಗೂ ಚಲನಶೀಲತೆಯನ್ನು ಸೂಚಿಸುತ್ತವೆ.

6. ಲಾಂಛನದ ಎರಡು ಕಡೆ ಇರುವ ಭತ್ತದ ತೆನೆಗಳು ಈ ಸೀಮೆಯ ಕೃಷಿ ಪರಂಪರೆಯ ಸಮೃದ್ಧತೆಯನ್ನು ಮತ್ತು ವಿಶೇಷವಾಗಿ ತೆನೆಯ ಕಾಳುಗಳು ಕೂಡು ಬಾಳ್ವೆಯ ಸಮಷ್ಟಿ ಪ್ರಜ್ಞೆಯನ್ನು ಪ್ರತಿನಿಧಿಸುತ್ತವೆ.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೦೧, ಫೆಬ್ರವರಿ, ೨೦೨೫(ಮಾಘ, ೧೨, ಶಕವರ್ಷ, ೧೯೪೬)<br>BENGALURU, SATURDAY, 01, FEBRUARY, 2025(MAGHA, 12, SHAKAVARSHA, 1946) | ನಂ. ೬೨<br>No. 62 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 55 ಶಾಸನ 2024, ಬೆಂಗಳೂರು, ದಿನಾಂಕ:01.02.2025**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024 ಇದಕ್ಕೆ 2025 ರ ಜನವರಿ ತಿಂಗಳ 30ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 12 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 12**
(2025 ರ ಫೆಬ್ರುವರಿ ತಿಂಗಳ 1ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2024**
(2025 ರ ಜನವರಿ ತಿಂಗಳ 30ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-




ile No. ED/151/UGV/2024-ED_SO_UNI1-EDUCATION HIGHER SEC (Computer No. 1560047)
ienerated from eOffice by DILLEPPA KATAGI, ED-ASST-UNI1(DK), ASSISTANT, EDUCATION HIGHER DEPARTMENT on 11/02/2025 04:51 PM

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪದಾವಳಿಯ ಪ್ರತಿಯೋಜನೆ.-** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29)ರಲ್ಲಿ "ರಾಯಚೂರು ವಿಶ್ವವಿದ್ಯಾನಿಲಯ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ "ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT

## NOTIFICATION

**NO. DPAL 55 SHASANA 2024, BENGALURU, DATED:01.02.2025**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2024 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:12(ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

## KARNATAKA ACT NO. 12 OF 2025

(First Published in the Karnataka Gazette Extra-ordinary on the 1st day of February, 2025)

**THE KARNATAKA STATE UNIVERSITIES (AMENDMENT) ACT, 2024**

(Received the assent of the Governor on the 30th day of January, 2025)

An Act further to amend the Karnataka State Universities Act, 2000.

Whereas it is expedient further to amend the Karnataka State Universities Act, 2000 (Karnataka Act 29 of 2001) for the purposes hereinafter appearing:



ile No. ED/151/UGV/2024-ED_SO_UNI1-EDUCATION HIGHER SEC (Computer No. 1560047)
ienerated from eOffice by DILLEPPA KATAGI, ED-ASST-UNI1(DK), ASSISTANT, EDUCATION HIGHER DEPARTMENT on 11/02/2025 04:51 PM

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



Be it enacted by the Karnataka State Legislature in the Seventy Fifth year of the Republic of India as follows:-

**1. Short title and Commencement.-** (1) This Act may be called the Karnataka State Universities (Amendment) Act, 2024.

(2) It shall come into force at once.

**2. Substitution of expression.-** In the Karnataka State Universities Act, 2000 (Karnataka Act 29 of 2001), for the words "Raichur University" wherever they occur, the words "Adikavi Sri Maharshi Valmiki University" shall be substituted.

The above translation of ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2024 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:12) be Published in official Gazette under clause (3) of Article 348 of the Constitution of India.

THAAWARCHAND GEHLOT
GOVERNOR OF KARNATAKA

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು



THAMMAIAH

ile No. ED/151/UGV/2024-ED_SO_UNI1-EDUCATION HIGHER SEC (Computer No. 1560047)
ienerated from eOffice by DILLEPPA KATAGI, ED-ASST-UNI1(DK), ASSISTANT, EDUCATION HIGHER DEPARTMENT on 11/02/2025 04:51 PM